# ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,
# ಹಿರೇಕೆರೂರ.

ಉಪಸ್ಥಿತರುಃ- **ಶ್ರೀ ವೈ. ಕೆ. ಬೇನಾಳ**, ಬಿ.ಎ., ಎಲ್.ಎಲ್.ಬಿ., (ಆನರ್ಸ),
ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,
ಹಿರೇಕೆರೂರ.

ದಿನಾಂಕ 02 ನೇ ನವೆಂಬರ್ 2021

**ಆರ್.ಎ. ಸಂಖ್ಯೆಃ 35/2020**

ಮೇಲ್ಮನವಿದಾರಃ-

ಶ್ರೀ ಗಂಗನಗೌಡ ಲಕ್ಕನಗೌಡರ.

ವಿರುದ್ಧ

ಎದುರುದಾರರುಃ-

ಶ್ರೀಮತಿ ಸುಶೀಲಮ್ಮ ಮತ್ತು ಇತರರು.

**ಮಧ್ಯಂತರ ಅರ್ಜಿ ಸಂಖ್ಯೆ-7**

ಅರ್ಜಿದಾರರುಃ-

1. ಶ್ರೀಮತಿ ಸುಶೀಲಮ್ಮ ಕೋಂ ಸಿದ್ದಪ್ಪ ಲಕ್ಕನಗೌಡರ,
   ವಯಸ್ಸು ಸುಮಾರು 77 ವರ್ಷ, ಸಾಃಕಡೂರು, ತಾಃ ಹಿರೇಕೆರೂರು,
   ಜಿಃ ಹಾವೇರಿ.

2. ಶ್ರೀಮತಿ ಅನಸೂಯ ಕೋಂ ಶ್ರೀ ಹೊನ್ನಪ್ಪ ಕರೂರ,
   ವಯಸ್ಸು ಸುಮಾರು 54 ವರ್ಷ, ಸಾಃ ಹರಿಹರ ಪಟ್ಟಣ,
   ತಾಃ ಹರಿಹರ, ಜಿಃ ದಾವಣಗೆರೆ.

(ಅರ್ಜಿದಾರರ ಪರ ವಕೀಲರು : ಶ್ರೀ ಪಿ.ಹೆಚ್.ಪಾಟೀಲ)

-:: ವಿರುದ್ಧ ::-

ಎದುರುದಾರಃ-

ಶ್ರೀ ಗಂಗನಗೌಡ ಲಕ್ಕನಗೌಡರ
ತಂದೆ ಲೇಟ್ ವೀರಹನುಮಂತಗೌಡ,
ವಯಸ್ಸು ಸುಮಾರುಃ 64 ವರ್ಷ, ಸಾಃ ಕಡೂರ ಗ್ರಾಮ,
ತಾಃ ರಟ್ಟಿಹಳ್ಳಿ (ಹಳೇ ಹಿರೇಕೆರೂರು)
ಜಿಃ ಹಾವೇರಿ.

(ಎದುರುದಾರನ ಪರ ವಕೀಲರು-ಶ್ರೀ ಹೆಚ್.ಎಂ.ಸೊರಟೂರ)

-:oOo:-

## -:: ಮಧ್ಯಂತರ ಅರ್ಜಿ ಸಂಖ್ಯೆ-7ರ ಮೇಲೆ ಆದೇಶ ::-

ಅರ್ಜಿದಾರರು/ 1 ಮತ್ತು 2ನೇ ಎದುರುದಾರರು ಈ ಮಧ್ಯಂತರ ಅರ್ಜಿ ಸಂಖ್ಯೆ-7ನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 13 ನಿಯಮ 10 ರ ಅಡಿಯಲ್ಲಿ ಸಲ್ಲಿಸಿ, ಇದೇ ನ್ಯಾಯಾಲಯದ ಆರ್.ಎ.ಸಂಃ 13/2020ರ ಕಡತದಲ್ಲಿರುವ ಮೂಲದಾವೆ ಸಂಃ 100/2016ರ ಕಡತವನ್ನು ತರಿಸಲು ಆದೇಶಿಸಬೇಕೆಂದು ಕೋರಿರುತ್ತಾರೆ.

2. ಈ ಮಧ್ಯಂತರ ಅರ್ಜಿಯನ್ನು 2ನೇ ಎದುರುದಾರಳು ತನ್ನ ಪ್ರಮಾಣಪತ್ರದೊಂದಿಗೆ ಸಲ್ಲಿಸಿ, ಅದರಲ್ಲಿ ವಿವರವಾದ ಕಾರಣಗಳನ್ನು ಹೇಳಿ, ಸದರಿ ಕಾರಣಗಳ ಮೇಲೆ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕು ಎಂದು ಪ್ರಾರ್ಥಿಸಿಕೊಂಡಿರುತ್ತಾಳೆ.

3. ಮೇಲ್ಮನವಿದಾರನು ಈ ಮಧ್ಯಂತರ ಅರ್ಜಿಗೆ ತನ್ನ ತಕರಾರನ್ನು ಸಲ್ಲಿಸಿ, ಅದರಲ್ಲಿ ವಿವರವಾದ ಕಾರಣಗಳನ್ನು ಹೇಳಿ, ಸದರಿ ಕಾರಣಗಳ ಮೇಲೆ ಈ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾನೆ.

4. 1 ಮತ್ತು 2 ನೇ ಎದುರುದಾರರ ಮತ್ತು ಮೇಲ್ಮನವಿದಾರನ ಪರ ವಕೀಲರ ವಾದವನ್ನು ಆಲಿಸಲಾಯಿತು.

5. ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆಃ-

ಅಂಶ-1 - ಅರ್ಜಿದಾರರು/ 1 ಮತ್ತು 2 ನೇ ಎದುರುದಾರರು ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಲು ಇರುವಂತಹ ಕಾರಣಗಳನ್ನು ತೋರಿಸಿದ್ದಾರೆಯೇ?

ಅಂಶ- 2- ಯಾವ ಆದೇಶ?

6. ಮೇಲಿನ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಉತ್ತರಿಸುತ್ತಿದ್ದೇನೆಃ-

ಅಂಶ-1 - ಸಕರಾತ್ಮಕವಾಗಿ ಮತ್ತು

ಅಂಶ-2 - ಅಂತಿಮ ಆದೇಶದಂತೆಃ

## ಕಾರಣಗಳು

7. ಅಂಶ-1:- ಮೇಲ್ಮನವಿದಾರನು, ಹಿರೇಕೆರೂರ ಪ್ರಧಾನ ದಿವಾಣಿ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದ ಮೂಲ ದಾವೆ ಸಂಖ್ಯೆಃ 100/2016 ರಲ್ಲಿ ದಿನಾಂಕ 04-08-2017 ರಂದು ಆದಂತಹ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾನೆ ಹಾಗೂ ಅರ್ಜಿದಾರರು /1 ಮತ್ತು 2 ನೇ ಎದುರುದಾರರು ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸುವುದರ ಮೂಲಕ ಇದೇ ನ್ಯಾಯಾಲಯದ ಆರ್.ಎ.ಸಂ. 13/2020 ರ ಕಡತದಲ್ಲಿರುವ ಮೂಲ ದಾವೆ ಸಂಃ 100/2016 ರ ಕಡತವನ್ನು ಈ ಮೇಲ್ಮನವಿಯಲ್ಲಿ ತರಿಸಲು ಆದೇಶಿಸಬೇಕೆಂದು ಕೋರಿರುತ್ತಾರೆ ಹಾಗೂ ಈ ಮಧ್ಯಂತರ ಅರ್ಜಿಯೊಂದಿಗೆ 2 ನೇ ಎದುರುದಾರಳು ತನ್ನ ಪ್ರಮಾಣ ಪತ್ರವನ್ನು ಸಲ್ಲಿಸಿ, ಅದರಲ್ಲಿ ಮೂಲದಾವೆ ಸಂಃ

100/2016 ರಲ್ಲಿ ಮೇಲ್ಮನವಿದಾರನಿಗೆ ಸಮನ್ಸ ಜಾರಿಯಾಗಿರುವ ಬಗ್ಗೆ ಇರುವ ದಾಖಲೆಗಳನ್ನು ಸಾಕ್ಷಿಗೆ ತೋರಿಸುವುದು ಅವಶ್ಯವಿದ್ದು, ಸದರಿ ಮೂಲ ದಾವೆ ಸಂಃ 100/2016 ರ ವಿಚಾರಣಾ ನ್ಯಾಯಾಲಯದ ದಾಖಲೆಗಳು ಇದೇ ನ್ಯಾಯಾಲಯದ ಆರ್.ಎ.ಸಂಃ 13/2020 ರಲ್ಲಿ ಅಳವಡಿಸಿಕೊಂಡಿದ್ದು ಇರುತ್ತದೆ. ಆದ್ದರಿಂದ, ಸದರಿ ಮೂಲ ದಾವೆ ಸಂಃ 100/2016 ರ ಸಂಪೂರ್ಣ ಕಡತವನ್ನು ಈ ಕೇಸಿನಲ್ಲಿ ತರಿಸಲು ಆದೇಶಿಸಬೇಕು ಎಂದು ಕೋರಿರುವುದರಿಂದ ಹಾಗೂ ಮೇಲ್ಮನವಿದಾರನು ವಿಚಾರಣಾ ನ್ಯಾಯಾಲಯದ ಮೂಲ ದಾವೆ ಸಂಃ 100/2016 ರ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ಈ ಮೇಲ್ಮನವಿಯನ್ನು ಸಲ್ಲಿಸಿರುವುದರಿಂದ, ಈ ಮೇಲ್ಮನವಿಯನ್ನು ಇತ್ಯರ್ಥಪಡಿಸಲು ಹಾಗೂ ಈ ಮೇಲ್ಮನವಿಯನ್ನು ಮೇಲ್ಮನವಿದಾರನು ತಡವಾಗಿ ಸಲ್ಲಿಸಿರುವುದಕ್ಕೆ ಇರುವಂತಹ ಕಾರಣಗಳನ್ನು ಇತ್ಯರ್ಥಪಡಿಸುವ ಸಲುವಾಗಿ ವಿಚಾರಣಾ ನ್ಯಾಯಾಲಯದ ಮೂಲ ದಾವೆ ಸಂಃ 100/2016 ರ ಸಂಪೂರ್ಣ ಕಡತವನ್ನು ಈ ಕೇಸಿಗೆ ತರಿಸಿಕೊಳ್ಳುವುದು ಕಾನೂನು ಹಾಗೂ ನ್ಯಾಯದ ಹಿತದೃಷ್ಟಿಯಿಂದ ಅವಶ್ಯವಾಗಿರುತ್ತದೆ ಹಾಗೂ ವಿಚಾರಣಾ ನ್ಯಾಯಾಲಯದ ಮೂಲ ದಾವೆ ಸಂಃ 100/2016 ರ ಕಡತವು ಇದೇ ನ್ಯಾಯಾಲಯದ ಆರ್.ಎ.ಸಂಃ 13/2020 ರಲ್ಲಿ ಇರುವುದರಿಂದ ಸದರಿ ಮೇಲ್ಮವಿಯಲ್ಲಿ ಇರುವಂತಹ ವಿಚಾರಣಾ ನ್ಯಾಯಾಲಯದ ಸಂಪೂರ್ಣ ಕಡತವನ್ನು ಈ ಕೇಸಿಗೆ ತರಿಸಿಕೊಳ್ಳುವುದರಿಂದ ಮೇಲ್ಮನವಿದಾರನಿಗೆ ಯಾವುದೇ ರೀತಿಯ ನಷ್ಟ ಹಾಗೂ ಅನ್ಯಾಯ ಉಂಟಾಗುವುದಿಲ್ಲ. ಅಲ್ಲದೇ, ಈ ಮೇಲ್ಮವಿಯಲ್ಲಿ ಹಾಗೂ ಮೇಲ್ಮವಿದಾರನು ಕಾಲಪರೀಮಿತಿ ಅಧಿನಿಯಮದ ಕಲಂ 5 ರ ಅಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಃ 2 ರಲ್ಲಿ ಆರೋಪಿಸಿರುವ ಎಲ್ಲ ಅಂಶಗಳನ್ನು ಈ ನ್ಯಾಯಾಲಯ ಪರಿಣಾಮಕಾರಿಯಾಗಿ ಹಾಗೂ ಅಂತಿಮವಾಗಿ ನ್ಯಾಯ ನಿರ್ಣಯಿಸಲು ಅವಶ್ಯವಾಗಿರುತ್ತದೆ. ಆದ್ದರಿಂದ, ಅರ್ಜಿದಾರರು /1 ಮತ್ತು 2 ನೇ ಎದುರುದಾರರು ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ಇದೇ ನ್ಯಾಯಾಲಯದ ಆರ್.ಎ.ಸಂಃ 13/2020 ರಲ್ಲಿ ಕಡತದಲ್ಲಿರುವ ವಿಚಾರಣಾ ನ್ಯಾಯಾಲಯದ ಮೂಲ ದಾವೆ

ಸಂಃ 100/2016 ರ ಸಂಪೂರ್ಣ ಕಡತವನ್ನು ಈ ಮೇಲ್ಮನವಿಗೆ ತರಿಸಲು ಇರುವಂತಹ ಕಾರಣಗಳನ್ನು ತೋರಿಸಿರುತ್ತಾರೆ. ಕಾರಣ, ಅಂಶ-1 ನ್ನು ಸಕರಾತ್ಮಕವಾಗಿ ಉತ್ತರಿಸಿದ್ದೇನೆ.

8. ಅಂಶ-2:– ಮೇಲಿನ ಅಂಶದಲ್ಲಿ ಚರ್ಚಿಸಲಾದ ಕಾರಣಗಳಿಗೆ ಈ ಕೆಳಕಂಡಂತೆ ಮಾಡಿದಃ

## ಆದೇಶ

ಅರ್ಜಿದಾರರು/ 1 ಮತ್ತು 2 ನೇ ಎದುರುದಾರರು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 13 ನಿಯಮ 10 ರ ಅಡಿಯಲ್ಲಿ ಸಲ್ಲಿಸಿರುವ, ಮಧ್ಯಂತರ ಅರ್ಜಿ ಸಂಖ್ಯೆ-7 ನ್ನು 100/- ರೂ.ಗಳ ಖರ್ಚಿನ ಮೇಲೆ ಪುರಸ್ಕರಿಸಲಾಗಿದೆ.

ಇದೇ ನ್ಯಾಯಾಲಯದ ಆರ್.ಎ.ಸಂಃ13/2020 ರಲ್ಲಿರುವ ವಿಚಾರಣಾ ನ್ಯಾಯಾಲಯದ ಮೂಲ ದಾವೆ ಸಂಃ 100/2016 ರ ಸಂಪೂರ್ಣ ಕಡತವನ್ನು ಈ ಮೇಲ್ಮವಿಗೆ ತರಿಸಲು ಈ ಮೂಲಕ ಕಚೇರಿಗೆ ನಿರ್ದೇಶಿಸಿ ಆದೇಶಿಸಿದೆ.

(ನನ್ನ ಉಕ್ತಲೇಖನದ ಪ್ರಕಾರ ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಅದರಲ್ಲಿದ್ದ ಲೋಪದೋಷಗಳನ್ನು ತಿದ್ದಿ ಇಂದು ದಿನಾಂಕ 02 ನೇ ನವೆಂಬರ್ 2021 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

ಸಹಿ/-
(ವೈ. ಕೆ. ಬೇನಾಳ),
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ಹಿರೇಕೆರೂರ.